# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 119

ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 05-07-2023

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಜೂನ್ 11 ರಂದು ಜಾರಿಗೆ ಬಂದ "ಶಕ್ತಿ ಯೋಜನೆ'ಯಿಂದ ಸರ್ಕಾರಕ್ಕೆ ಆಗುವ ವಾರ್ಷಿಕ ವೆಚ್ಚ ಎಷ್ಟು; ಹಾಗೂ ಇದರ ನಷ್ಟ, ಸಾಧಕ-ಬಾಧಕಗಳು ಏನು; ಈ ಯೋಜನೆಗೆ ಸರ್ಕಾರವು ಮೀಸಲಿಟ್ಟ ಅನುದಾನ ಎಷ್ಟು; (ವಿವರ ನೀಡುವುದು)</td><td>"ಶಕ್ತಿ ಯೋಜನೆ'ಯಿಂದ ಸರ್ಕಾರಕ್ಕೆ ಆಗುವ ವಾರ್ಷಿಕ ವೆಚ್ಚದ ವಿವರ ಈ ಕೆಳಕಂಡಂತಿದೆ:<br>(ರೂ. ಕೋಟಿಗಳಲ್ಲಿ)<br>
<table>
<tr><th>ನಿಗಮ</th><th>ವಾರ್ಷಿಕ ಒಟ್ಟು ಯೋಜನಾ ವೆಚ್ಚ (ಅಂದಾಜು)</th></tr>
<tr><td>ಕ.ರಾ.ರ.ಸಾ.ನಿಗಮ</td><td>1563.00</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>821.25</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>1295.75</td></tr>
<tr><td>ಕ.ಕ.ರ.ಸಾ.ನಿಗಮ</td><td>850.60</td></tr>
</table>
<br>ಈ ಯೋಜನೆಯ ಸಾಧಕಗಳು ಈ ಕೆಳಕಂಡಂತಿವೆ:<br>
1. ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯವನ್ನು ಜಾರಿಗೊಳಿಸಿರುವುದರಿಂದ ರಾಜ್ಯದಲ್ಲಿ ಮಹಿಳಾ ಸಬಲೀಕರಣಕ್ಕೆ ಅನುಕೂಲವಾಗಲಿದೆ.<br>
2. ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯದಿಂದ ಮಹಿಳೆಯರು ಆರ್ಥಿಕವಾಗಿ ಮುನ್ನಡೆಯಲು ಅನುಕೂಲವಾಗಲಿದೆ. ಎಲ್ಲಾ ವರ್ಗದ ಮಹಿಳೆಯರು ಅಂದರೆ ಅಸಂಘಟಿತ ವಲಯದಲ್ಲಿ ದುಡಿಯುವ ಮಹಿಳೆಯರು, ಗಾರ್ಮೆಂಟ್ಸ್ ನೌಕರಿಯಲ್ಲಿರುವ ಮಹಿಳೆಯರು, ಕೂಲಿ ಕಾರ್ಮಿಕರು, ರೈತ ಮಹಿಳೆಯರು ಇತ್ಯಾದಿಯಾಗಿ ಎಲ್ಲಾ ವರ್ಗದ ಮಹಿಳೆಯರಿಗೆ ಆರ್ಥಿಕವಾಗಿ ಅನುಕೂಲವಾಗಲಿದೆ. ಇದರಿಂದ ಮಹಿಳೆಯರು ಸಮಾಜದ ಮುಖ್ಯವಾಹಿನಿಗೆ ಬರಲು ಅನುಕೂಲವಾಗುತ್ತದೆ.<br>
3. ರಾಜ್ಯ ಸಾರಿಗೆ ನಿಗಮದ ಬಸ್ಸುಗಳಲ್ಲಿ ಈ ಸೌಲಭ್ಯವನ್ನು ಒದಗಿಸುವುದರಿಂದ ಮಹಿಳೆಯರಿಗೆ ವ್ಯವಸ್ಥಿತ ಮತ್ತು ಸುರಕ್ಷಿತ ಪ್ರಯಾಣ ದೊರೆಯುತ್ತದೆ.<br>
4. ಸಮೂಹ ಸಾರಿಗೆಗೆ ಉತ್ತೇಜನ ದೊರೆಯುತ್ತದೆ.<br>
5. ಇದರಿಂದ ಪರಿಸರ ಮಾಲಿನ್ಯ ಕಡಿಮೆಯಾಗುತ್ತದೆ.<br>
6. ಬೆಂಗಳೂರು ನಗರದ ಸಂಚಾರ ದಟ್ಟಣೆ ಕಡಿಮೆಯಾಗುವುದರೊಂದಿಗೆ ಸಾಮೂಹಿಕ ಸಾರಿಗೆಯನ್ನು ಉತ್ತೇಜಿಸಿದಂತಾಗಿದೆ.</td></tr>
</table>

| | | |
|---|---|---|
| ಆ. | ಈ ನಷ್ಟವನ್ನು ಸರಿದೂಗಿಸಲು ಸರ್ಕಾರ ಪರ್ಯಾಯವಾಗಿ ಯಾವ-ಯಾವ ಕ್ರಮಗಳನ್ನು ರೂಪಿಸಿದೆ; (ಮಾಹಿತಿ ನೀಡುವುದು) | ಸದರಿ ಯೋಜನೆಯು ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದ ಯೋಜನೆಯಾಗಿರುವುದರಿಂದ ಇದರಿಂದ ಯಾವುದೇ ಬಾಧಕಗಳಿರುವುದಿಲ್ಲ. ಇದು ಹೊಸ ಯೋಜನೆಯಾಗಿರುವ ಹಿನ್ನಲೆಯಲ್ಲಿ, ಅನುದಾನವನ್ನು ನಿಗದಿಪಡಿಸಬೇಕಿರುತ್ತದೆ.<br><br>ಶಕ್ತಿ ಯೋಜನೆಯಡಿಯಲ್ಲಿ ಉಂಟಾಗುವ ವೆಚ್ಚವನ್ನು ಸರ್ಕಾರದಿಂದ ಶೂನ್ಯ ಟಿಕೇಟ್/ಶಕ್ತಿ ಸ್ಮಾರ್ಟ್‌ಕಾರ್ಡ್ ದತ್ತಾಂಶವನ್ನು ಆಧರಿಸಿ ಭರಿಸಲಾಗುವ ಹಿನ್ನಲೆಯಲ್ಲಿ ನಷ್ಟ ಉಂಟಾಗುವ ಪ್ರಶ್ನೆ ಉದ್ಭವಿಸುವುದಿಲ್ಲ. |
| ಇ. | ಈ ಯೋಜನೆಯನ್ನು ಕೇವಲ ಮಹಿಳೆಯರಿಗೆ ಮೀಸಲಿಡುವ ಬದಲಾಗಿ ಶಾಲಾ ಕಾಲೇಜುಗಳ ಗಂಡು ಮಕ್ಕಳಿಗೂ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಬಹುದಲ್ಲದೇ ಈ ಬಗ್ಗೆ ಸರ್ಕಾರದ ನಿಲುವೇನು; | 1ನೇ ತರಗತಿಯಿಂದ 7ನೇ ತರಗತಿವರೆಗಿನ ಎಲ್ಲಾ ವಿದ್ಯಾರ್ಥಿಗಳಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಎಲ್ಲಾ ತರಗತಿಯ ವಿದ್ಯಾರ್ಥಿಗಳಿಗೆ ಸಾರಿಗೆ ಸಂಸ್ಥೆಗಳಿಂದ ಉಚಿತ ಬಸ್ ಪಾಸ್ ವಿತರಣೆ ಮಾಡಲಾಗುತ್ತಿದೆ.<br>ಇನ್ನುಳಿದಂತೆ ಪದವಿ, ಸ್ನಾತಕೋತ್ತರ ಪದವಿವರೆಗಿನ ಎಲ್ಲಾ ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ವಿದ್ಯಾರ್ಥಿ ಪಾಸುಗಳನ್ನು ವಿತರಣೆ ಮಾಡಲಾಗುತ್ತಿದ್ದು, ಉಚಿತ ಸಾರಿಗೆ ಸೌಲಭ್ಯ ಒದಗಿಸುವ ಪ್ರಸ್ತಾವನೆ ಇರುವುದಿಲ್ಲ. |
| ಈ. | ಈ ಯೋಜನೆಯ ಬಗ್ಗೆ ಸರ್ಕಾರ ನೀಡಿರುವ ಹೇಳಿಕೆಯಂತೆ ರಾಜ್ಯದ ಸರಹದ್ದಿನಿಂದ ನೆರೆ ರಾಜ್ಯದ 20 ಕಿ.ಮೀ.ರವರೆಗೆ ಅನ್ವಯಿಸುತ್ತದೆ ಎಂಬುದು ನಿಜವೇ; ಈ ಯೋಜನೆಯು ರಾಜ್ಯದ ಎಲ್ಲಾ ಸರಹದ್ದುಗಳಿಗೆ ಅನ್ವಯಿಸುತ್ತದೆಯೇ; (ಸಂಪೂರ್ಣ ವಿವರ ನೀಡುವುದು) | ಕ.ರಾ.ರ.ಸಾ.ನಿಗಮ, ವಾ.ಕ.ರ.ಸಾ.ಸಂಸ್ಥೆ ಮತ್ತು ಕ.ಕ.ರ.ಸಾ.ನಿಗಮಗಳ ಕೆಲವು ಸಾರಿಗೆಗಳು (Enclave Routes) ಕರ್ನಾಟಕ ರಾಜ್ಯದಿಂದ ಪ್ರಾರಂಭವಾಗಿ ಬೇರೆ ರಾಜ್ಯದಲ್ಲಿ ಅಂದಾಜು 01 ರಿಂದ 16 ಕಿ.ಮೀ ರವರೆಗೆ ಕಾರ್ಯಾಚರಿಸಿ ಪುನ: ರಾಜ್ಯದ ಸ್ಥಳಕ್ಕೆ ಅಂತ್ಯಗೊಳ್ಳುತ್ತವೆ (ಉದಾ:- ದೇವದುರ್ಗ, ತಿರುಮಣಿ ಇತ್ಯಾದಿ). ಅಂತಹ ಸಾರಿಗೆಗಳಲ್ಲಿ ಶಕ್ತಿ ಯೋಜನೆಯಡಿ ಮಹಿಳೆಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರು ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ. |
| ಉ. | ಈ ಯೋಜನೆಯಡಿಯಲ್ಲಿ ಎಲ್ಲಾ ಮಹಿಳೆಯರೂ ಕೂಡಾ ಪ್ರಿ-ಬುಕ್ಕಿಂಗ್ (ಕಾಯ್ದಿರಿಸುವಿಕೆ) ಮಾಡಿ ಪ್ರಯಾಣಿಸಬಹುದೇ? (ವಿವರ ನೀಡುವುದು) | ಬೆಂ.ಮ.ಸಾ.ಸಂಸ್ಥೆಯನ್ನು ಹೊರತುಪಡಿಸಿ, ಕ.ರಾ.ರ.ಸಾ.ನಿಗಮ, ವಾ.ಕ.ರ.ಸಾ.ಸಂಸ್ಥೆ ಮತ್ತು ಕ.ಕ.ರ.ಸಾ.ನಿಗಮಗಳಲ್ಲಿ ಶಕ್ತಿ ಯೋಜನೆಯಡಿ ಫಲಾನುಭವಿಗಳಿಗೆ ರಾಜ್ಯದೊಳಗೆ ಆಚರಣೆಯಾಗುವ ವೇಗದೂತ (ಕರ್ನಾಟಕ ಸಾರಿಗೆ) ಬಸ್ಸುಗಳಲ್ಲಿ ಮುಂಗಡ ಆಸನ ಕಾಯ್ದಿರಿಸಲು ಪ್ರತಿ ಸಾರಿಗೆ ಸೇವೆಯಲ್ಲಿ 50% ಆಸನಗಳನ್ನು ಮೀರದಂತೆ, ಮುಂಗಡ ಕಾಯ್ದಿರಿಸುವ ಶುಲ್ಕವನ್ನು ಪಾವತಿಸಿಕೊಂಡು ಆಸನ ಕಾಯ್ದಿರಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ. |

ಸಂಖ್ಯೆ: ಟಿಡಿ 83 ಟಿಸಿಕ್ಯೂ 2023

(ರಾಮಲಿಂಗಾ ರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು